GULBARGA UNIVERSITY
"Jnana Ganga", GULBARGA - 585 106, Karnataka, India.
Ph.: 08472-263202
Fax. 08472-263206
E-Mail: root @guluni.kar.nic.in
Grams: UNIGUL

ಕ್ರ.ಸಂ.ಗುವಿಗು/ವಿಮವಿ/ಬಿಓಎಸ್/2015-16/ ದಿನಾಂಕ: 07.01.2016

## ಸುತ್ತೋಲೆ

ವಿಷಯ:- ನಿಗದಿಪಡಿಸಲಾದ ಗರಿಷ್ಠ ಅವಧಿಯಲ್ಲಿ ಕೋರ್ಸ ಪೂರ್ಣಗೊಳಿಸದೇ ಇರುವ ವಿದ್ಯಾರ್ಥಿಗಳಿಗಾಗಿ ಪರೀಕ್ಷೆಗೆ ಹಾಜರಾಗಲು ವಿಶೇಷ ಅವಕಾಶ ನೀಡುವ ಬಗ್ಗೆ.

ಉಲ್ಲೇಖ:-1. ಈ ಕಚೇರಿ ಪತ್ರ ಸಂ. ಗುವಿಗು/ವಿಮವಿ/ಬಿ.ಓ.ಎಸ್./2015-16/2337 ದಿನಾಂಕ 05.01.2016

2. ಕುಲಪತಿಗಳ ಅನುಮೋದನೆಯ ದಿನಾಂಕ 7.1.2016

ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರು, ಸ್ನಾತಕೋತ್ತರ ಕೇಂದ್ರಗಳ ವಿಶೇಷಾಧಿಕಾರಿಗಳು ಹಾಗೂ ಸ್ನಾತಕೋತ್ತರ ಕೋರ್ಸ ಹೊಂದಿರುವ ಕಾಲೇಜಿನ ಪ್ರಾಂಶುಪಾಲರಿಗೆ ಈ ಮೂಲಕ ತಿಳಿಸುವದೇನೆಂದರೆ, ಗುಲಬರ್ಗಾ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಕೋರ್ಸುಗಳಲ್ಲಿ ಪ್ರವೇಶ ಪಡೆದು, ಸ್ನಾತಕೋತ್ತರ ಕೋರ್ಸಿನ ಕ್ರಮನಿಯಮಾವಳಿಗಳ ಪ್ರಕಾರ ನಿಗದಿಪಡಿಸಲಾದ ಗರಿಷ್ಠ ಅವಧಿಯಲ್ಲಿ ಕೋರ್ಸ ಪೂರ್ಣಗೊಳಿಸದೇ ಇರುವ ವಿದ್ಯಾರ್ಥಿಗಳಿಗಾಗಿ ದಿನಾಂಕ 11.01.2016 ರಿಂದ ಪ್ರಾರಂಭವಾಗಲಿರುವ ಪ್ರಥಮ ಹಾಗೂ ತೃತಿಯ ಅಲ್ಲದೇ ಮುಂಬರುವ ದ್ವಿತಿಯ ಹಾಗೂ ನಾಲ್ಕನೇ ಸೆಮೆಸ್ಟರಗಳ ಪರೀಕ್ಷೆಗಳಿಗೆ ಹಾಜರಾಗಲು ಕೊನೆಯ ಅವಕಾಶ ನೀಡಲಾಗಿದೆ.

ಮುಂದುವರೆದು, ಈ ಅವಕಾಶವನ್ನು ದಿನಾಂಕ 11.01.2016 ರಂದು ಜರುಗಲಿರುವ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ನಿರೀಕ್ಷಿಸಿ, ಸಭೆಯ ನಿರ್ಣಯದ ಷರತ್ತಿಗೊಳಪಟ್ಟು ನೀಡಲಾಗಿದೆ. ಅಲ್ಲದೇ ಇನ್ನು ಮುಂದೆ ಯಾವುದೇ ಕಾರಣಕ್ಕೂ ಇಂತಹ ಅವಕಾಶ ನೀಡಲಾಗುವದಿಲ್ಲ.

ಆಯಾ ವಿಭಾಗದ ಮುಖ್ಯಸ್ಥರು, ವಿಶೇಷಾಧಿಕಾರಿಗಳು, ಹಾಗೂ ಸ್ನಾತಕೋತ್ತರ ಕೋರ್ಸ ಹೊಂದಿರುವ ಕಾಲೇಜಿನ ಪ್ರಾಂಶುಪಾಲರು ಅಂತಹ ವಿದ್ಯಾರ್ಥಿಗಳಿಂದ ಸಿಂಡಿಕೇಟ್ ಸಭೆಯ ನಿರ್ಣಯಕ್ಕೆ ಬದ್ಧರಾಗಿರುವದಾಗಿ "ಮುಚ್ಚಳಿಕೆ ಪತ್ರ" ಪಡೆದು ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಅವಕಾಶ ನೀಡಲು ಈ ಮೂಲಕ ಸೂಚಿಸಲಾಗಿದೆ.

07/01/16

ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಗೆ,
ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರಿಗೆ,
ಪ್ರತಿಗಳು:-

1. ಎಲ್ಲಾ ನಿಕಾಯದ ಡೀನರಿಗೆ ಮಾಹಿತಿಗಾಗಿ
2. ಕುಲಸಚಿವರು (ಮೌಲ್ಯಮಾಪನ) ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ
3. ವಿತ್ತಾಧಿಕಾರಿಗಳು ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ
4. ವಿಶೇಷಾಧಿಕಾರಿಗಳು ಸ್ನಾತಕೋತ್ತರ ಕೇಂದ್ರ ರಾಯಚೂರು/ಬೀದರ
5. ಸ್ನಾತಕೋತ್ತರ ಕೋರ್ಸ ಹೊಂದಿರುವ ಕಾಲೇಜಿನ ಪ್ರಾಂಶುಪಾಲರ ಮಾಹಿತಿಗಾಗಿ
6. ಮುಖ್ಯಸ್ಥರು ಗಣಕ ಕೇಂದ್ರ ಇವರಿಗೆ ವೆಬ್ ಸೈಟ್‌ನಲ್ಲಿ ಪ್ರಕಟಿಸಲು

Bos